# ಢೈ ಢೈ ಢೈ ಬಂಗಾರಿ

■ ಜ್ಯೋತಿ ಬೊಮ್ಮ
ಕಲೆ: ಸಂತೋಷ್ ಸಸಿಹಿತ್ಲು

ಥಾಯ್ಲೆಂಡ್ ದೇಶ ಅಂದ್ರೆ ಮೊದಲು ನೆನಪಿಗೆ ಬರುವುದೇ ಮಸಾಜ್ ಅಲ್ವ. ಕನ್ನಡದಲ್ಲಿ ಮಸಾಜ್ ಅಂದ್ರೆ ಮಾಲೀಶ್ ಮಾಡೋಡು. ನೀವು ಅನ್ನಬಹುದು, ಯಾರಿಂದಾದರು ಕೆಲಸ ಆಗಬೇಕಾದ್ರೆ ಅವರಿಗೆ ಹೊಗಳಿ ನಮ್ಮ ಕೆಲಸ ಸಾಧಿಸಿಕೊಳ್ಳುವುದಕ್ಕೆ ಮಾಲೀಶ್ ಮಾಡೋಡು ಎಂಬ ವ್ಯಂಗೋಕ್ತಿಯೂ ಇದೆ.

ಬ್ಯಾಂಕಾಕ್‌ನ ಗಲ್ಲಿ ಗಲ್ಲಿಗಳಲ್ಲಿ ಕೈಗೊಂದು ಕಾಲಿಗೊಂದರಂತೆ ಮಸಾಜ್ ಪಾರ್ಲರ್‌ಗಳು. ಹೊರಗೆ ಕುಳಿತ ಲಲನೆಯರು ಮಸಾಜ್ ಎಂದು ರಾಗವಾಗಿ ಹೇಳುತ್ತಾ ಕುಳಿತಿರುತ್ತಾರೆ. ಇಡೀ ಥಾಯ್ಲೆಂಡ್ ಪ್ರವಾಸದಲ್ಲಿ ನಮ್ಮೆಲ್ಲರ ಗಮನ ಈ ಮಸಾಜ್ ಪಾರ್ಲರ್‌ಗಳ ಮೇಲೆ ಎಂಬುದು ಅಲ್ಲಗಳೆಯಲಾಗದು. ಮಸಾಜ್ ಎಂಬ ಶಬ್ದ ಬಂದ ಕಡೆಗಳಲೆಲ್ಲ ಕತ್ತು ತಾನಾಗೇ ವಾಲುತಿತ್ತು. ನಮ್ಮ ಗುಂಪಿನಲ್ಲಿದ್ದ ಮಹಿಳೆಯರಿಗೆ ತಮ್ಮ ಗಂಡಂದಿರ ಕತ್ತು ಯಾವ ಕಡೆ ವಾಲುತ್ತಿದೆ ಎಂದು ತಮ್ಮ ಕತ್ತು ತಿರುಗಿಸಿ ನೋಡಿ ನೋಡಿ ಕತ್ತು ನೋವು ಬರಿಸಿಕೊಂಡದ್ದಾಯ್ತು. ಒಟ್ಟಿನಲ್ಲಿ ಥಾಯ್ಲೆಂಡ್ ಪ್ರವಾಸದ ಪ್ರಮುಖ ಆಕರ್ಷಣೆ ಈ ಮಸಾಜ್ ಎನ್ನುವುದು ಒಪ್ಪಿಕೊಂಡು ಮಸಾಜ್ ಮಾಡಿಸಿಕೊಳ್ಳಲು ಮುಹೂರ್ತ ನಿಗದಿ ಮಾಡಲು ತೊಡಗಿದೆವು. ಮಸಾಜ್ ಬರಿ ಪುರುಷರಿಗೆ ಮಾತ್ರ ಸೀಮಿತ ಎಂದು ತಿಳಿದಿದ್ದ ನಮಗೆ ಸ್ತ್ರೀಯರು ಈ

